# ಕರಾವಳಿ ಕರ್ನಾಟಕದ ಪ್ರಥಮ ಎನ್‌ಝೆನ್ ಶಾಖೆ ಉದ್ಘಾಟನೆ



**ಸುರತ್ಕಲ್, ಮಾ. 30:** ಯುವಶಕ್ತಿ ಹಾಗೂ ವಿದ್ಯಾರ್ಥಿ ಸಮುದಾಯವನ್ನು ಇಂಡಿಯಾ ಪೋಸ್ಟ್ ತನ್ನತ್ತ ಸೆಳೆಯಲು ಸುರತ್ಕಲ್ ಎನ್‌ಐಟಿಕೆ ಕ್ಯಾಂಪಸ್ ನಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಎನ್ ಝೆನ್ ಶಾಖೆಯನ್ನು ಆರಂಭಿಸಿದೆ.

ನ್ಯೂ ಜನರೇಷನ್ ಅಂಚೆ ಕಚೇರಿಯನ್ನು ಬೆಂಗಳೂರಿನ ಅಂಚೆ ಹಣಕಾಸು ವಿಭಾಗದ ಪ್ರಧಾನ ವ್ಯವಸ್ಥಾಪಕಿ ಜೂಲಿಯಾ ಮೊಹಾಪಾತ್ರ ಉದ್ಘಾಟಿಸಿದರು. ವಿದ್ಯಾರ್ಥಿ ಸಮುದಾಯ ಹಾಗೂ ಯುವ ಪೀಳಿಗೆಗೆ ಅಂಚೆ ಕಚೇರಿಯಲ್ಲಿನ ವಿವಿಧ ಸೌಲಭ್ಯಗಳನ್ನು ಪರಿಚಯಿಸುವ ಸಲುವಾಗಿ ಅತ್ಯಾಧುನಿಕವಾಗಿ ವಿನ್ಯಾಸ ಗೊಳಿಸಲಾಗಿದೆ.

ಕರ್ನಾಟಕ ವೃತ್ತದಲ್ಲಿ ನಾಲ್ಕನೇ ಶಾಖೆಯಾಗಿದ್ದು ಕರಾವಳಿ ಕರ್ನಾಟಕದ ಪ್ರಥಮ ಶಾಖೆಯಾಗಿದೆ ಎಂದರು. 2

## ಏನೆಲ್ಲ ಸೌಲಭ್ಯಗಳು ಇರಲಿವೆ?

ಉಚಿತ ಹೈ-ಸ್ಪೀಡ್ ವೈ-ಫೈ ಮತ್ತು ಸ್ವಯಂ-ಬುಕಿಂಗ್ ಕಿಯೋಸ್ಕ್, ಆಧುನಿಕ ಬರವಣಿಗೆಯ ಟೇಬಲ್, ವಿಶ್ರಾಂತಿಗಾಗಿ ಲಾಬಿ ಮತ್ತು ಗ್ರಂಥಾಲಯ ಉಚಿತ ಕಾಫಿ, ಚಹಾ ಸೌಲಭ್ಯ ಮತ್ತು ನೀರಿನ ವ್ಯವಸ್ಥೆ, ಸಾಂಪ್ರದಾಯಿಕ ಪೋಸ್ಟ್ ಬಾಕ್ಸ್ ಮತ್ತು ಜೆನ್-ಝಡ್ ವಿದ್ಯಾರ್ಥಿಯ ನಡುವಿನ ವಿಶಿಷ್ಟವಾದ 'ಹೈ-ಫೈವ್' ಭಿತ್ತಿಚಿತ್ರವನ್ನು ಒಳಗೊಂಡ ಮೀಸಲಾದ ಆಟದ ವಲಯ ಮತ್ತು ಸೆಲ್ಫಿ ಪಾಯಿಂಟ್ ಇರಲಿವೆ.

Udayavani, Date: 31_03_2026, p. 01